ವಿಜಯ ಕರ್ನಾಟಕ

# ‘21ನೇ ಶತಮಾನದ ಸಮಾಜ ನೆಟ್‌ವರ್ಕ್ ಆಧಾರಿತ’

**ವಿಕ ಸುದ್ದಿಲೋಕ,** ಬೆಂಗಳೂರು

ಕಾಲೇಜು ಮುಗಿಸಿ ಹೊರಬಂದಾಗ ಜೇಬಿನಲ್ಲಿದ್ದುದು ಕೇವಲ 200 ರೂಪಾಯಿ. ಆದರೆ, ಗುರಿ ಸ್ಪಷ್ಟವಾಗಿತ್ತು. ಆ ಕಾರಣದಿಂದಲೇ ಇಂದು ಈ ಸ್ಥಾನದಲ್ಲಿ ನಿಂತಿದ್ದೇನೆ ಎಂದು ಭಾರತೀಯ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರ ಅಧ್ಯಕ್ಷ ನಂದನ್ ನಿಲೇಕಣಿ ಹೇಳಿದರು.

ಜೈನ್ ವಿಶ್ವವಿದ್ಯಾಲಯ ಗುರುವಾರ ಹಮ್ಮಿಕೊಂಡಿದ್ದ 3ನೇ ಘಟಿಕೋತ್ಸವದಲ್ಲಿ ಅವರು ಮಾತನಾಡಿದರು.

‘‘ನಾನು ಒಂದೆ ವೇಳೆ ಯಶಸ್ಸು ಗಳಿಸಿರಬಹುದು ಎಂದಾದರೆ ಅದಕ್ಕೆ ಇದ್ದ ಕಾರಣಗಳು ನಿಮಗೂ ಇವೆ. ಪದವಿ ಪಡೆದವರಿಗೆ ಇಂದು ಸಾಕಷ್ಟು ಅವಕಾಶಗಳಿವೆ. ಉನ್ನತವಾದ ಗುರಿ ಇಟ್ಟುಕೊಳ್ಳಬೇಕು ಮತ್ತು ಅದಕ್ಕಾಗಿ ಶ್ರಮವಹಿಸಿ ದುಡಿಯಬೇಕು,’’ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ‘‘ಐಐಟಿ ಮುಂಬೈನಲ್ಲಿ ಪದವಿ ಪಡೆದು ಹೊರಬಂದ ನಂತರ ಕಂಪನಿಯೊಂದರಲ್ಲಿ ಉದ್ಯೋಗಕ್ಕೆ ಸೇರಿಕೊಂಡೆ. ಆಗ ಒಮ್ಮೆ ನಾರಾಯಣ ಮೂರ್ತಿ ಅವರ ಪರಿಚಯ ಆಯಿತು. ಉತ್ತಮ ತಂಡವೊಂದು ಒಟ್ಟಾಗಿ ಕೆಲಸ ಮಾಡಿದಾಗ ಯಾವ ಮಟ್ಟಿಗೆ ಯಶಸ್ಸು ಗಳಿಸಬಹುದು ಎನ್ನುವುದಕ್ಕೆ ಇನ್ಫೋಸಿಸ್ ಸಾಕ್ಷಿ. ಆರಂಭದಲ್ಲಿ ಏಳು ಮಂದಿ ಒಟ್ಟಾಗಿ ಸ್ಥಾಪಿಸಿದ ಸಂಸ್ಥೆ ಇಂದು ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಕಷ್ಟು ಹೆಸರು ಮಾಡಿದೆ. ಈಗಲೂ ತಮ್ಮನ್ನು ಇನ್ಫೋಸಿಸ್ ಸಂಸ್ಥೆ ಯಿಂದಲೇ ಗುರುತಿಸಲಾಗುತ್ತದೆ,’’ ಎಂದು ಹೇಳಿದರು.



20ನೇ ಶತಮಾನ ಶ್ರೇಣೀಕೃತ ಸಮಾಜವಾಗಿದ್ದರೆ, 21ನೇ ಶತಮಾನದ ಸಮಾಜ ಸಂಪೂರ್ಣ ನೆಟ್‌ವರ್ಕ್ ಆಧಾರಿತವಾಗಿದೆ. ಇಲ್ಲಿ ಅಂದುಕೊಂಡದ್ದನ್ನು ಸಾಧಿಸುವ ಎಲ್ಲ ಅವಕಾಶಗಳೂ ಇವೆ. ಉತ್ತಮವಾದ ಗುರಿಯನ್ನು ಹಾಕಿಕೊಳ್ಳಿ. ಆ ಗುರಿ ಮುಟ್ಟುವಲ್ಲಿ ಯಶಸ್ಸು ಗಳಿಸಿ,’’ ಎಂದರು.

ಜೈನ್ ವಿಶ್ವವಿದ್ಯಾಲಯ ಅಧ್ಯಕ್ಷ ಡಾ. ಚನ್‌ರಾಜ್ ರಾಯ್‌ಚಂದ್, ‘‘ಪದವಿ ಪಡೆದು ಹೊರಬರುವ ವಿದ್ಯಾರ್ಥಿಗಳು ಉದ್ಯೋಗ ಹುಡುಕುವುದಕ್ಕಿಂತ ಸ್ವಂತ ಉದ್ಯಮ ಮಾಡುವ ಬಗ್ಗೆ ಆಸಕ್ತಿ ಹೊಂದಬೇಕು. ಕಾರಣ ಇದರಿಂದ ಇನ್ನೂ ಹತ್ತಾರು ಜನರಿಗೆ ಉದ್ಯೋಗ ದೊರಕಿಸಲು ಸಾಧ್ಯವಾಗುತ್ತದೆ,’’ ಎಂದು ಸಲಹೆ ನೀಡಿದರು.

**ಪದವಿ ಪ್ರದಾನ**

ಇದೇ ಸಂದರ್ಭದಲ್ಲಿ ಪದವಿ, ಸ್ನಾತಕೋತ್ತರ ಪದವಿ ಮತ್ತು ಸಂಶೋಧನಾ ವಿದ್ಯಾರ್ಥಿಗಳು ಸೇರಿ ಒಟ್ಟು 2279 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಜೈನ್ ವಿಶ್ವವಿದ್ಯಾಲಯ ಕುಲಪತಿ ಡಾ.ಸಿ.ಜಿ. ಕೃಷ್ಣದಾಸ ನಾಯರ್, ರಿಜಿಸ್ಟ್ರಾರ್ ಪ್ರೊ. ಎನ್.ವಿ.ಎಚ್.ಕೃಷ್ಣನ್ ಮತ್ತಿತರರು ಉಪಸ್ಥಿತರಿದ್ದರು.